ಸುಮ್ಮನೆ ಮುಂದೆ ನಡೆದೆ. ಈ ರಂಗಸ್ವಾಮಿಯಂಥ ಡೋಂಗಿ ವ್ಯಕ್ತಿ ಈ ಪ್ರಪಂಚದಲ್ಲಿ ಇರುವುದು ಇವನೊಬ್ಬನೇ ಏನೋ.. ಮುಂದೆ ಇದ್ದರೆ ತಲೆ ನೆಲಕ್ಕೆ ತಾಗುವಂತೆ ಬಾಗುವವ, ಹಿಂದೆ ವ್ಯಂಗ್ಯವಾಗಿ ಆಡಿಕೊಳ್ಳುವವ... ಆದರೂ ಇವರಿಗೆ ಇವನ ಮೇಲೆ ಭಾರಿ ನಂಬಿಕೆ. ಇವರಿಗೆ ಗೆಳತಿಯರನ್ನು ಹೊಂದಿಸಿ ಕೊಡುವವನು ಇವನೇ... ಗೊತ್ತು ನನಗೆ, ಆದರೆ ಏನೂ ಮಾಡಲಾಗದ ಅಸಹಾಯಕತೆ.

ಸುಮ್ಮನೆ ಅವನ ಹಿಂದೆ ನಡೆದು ಕೋಣೆಯೊಳಗೆ ಅಡಿ ಇರಿಸಿದೆ.

ತಮ್ಮ ಮೊಬೈಲಿನಲ್ಲಿ ಮಾತನಾಡುತ್ತಾ ಇದ್ದ ಇವರು ತಮ್ಮ ಮಾತು ಮುಂದುವರಿಸಿದರು.

ಕಾಫಿಗೆ ಹೇಳಿದ್ದೇನೆ ಮೇಡಂ... ಕಾಲು ಗಂಟೇಲಿ ಹೊರಡಬೇಕು ಅಷ್ಟೇ ದೊಡ್ಡ ಯಜಮಾನರಿಗೆ ಬೇರೆ ಕೋಣೆ ಏರ್ಪಾಡು ಮಾಡಿದ್ದೇನೆ. ಸರ್... ಸದ್ದೇ ಇಲ್ಲದೆ ಆಚೆ ನಡೆದ ರಂಗಸ್ವಾಮಿ.

ಸೋಫಾ ಮೇಲೆ ಕುಳಿತು, ಹಿಂದಕ್ಕೊರಗಿ ಕಾಲು ಸೆಟಸಿದೆ. ಹಣೆಯ ಮೇಲೆ ಮೆಲ್ಲನೆ ನನ್ನ ಬೆರಳುಗಳಿಂದ ಮಸಾಜ್ ಮಾಡಿಕೊಂಡೆ.

ರೂಮಿನ ಒಳಗೆ ಬರುವ ಬಾಗಿಲೊಂದು, ಪಕ್ಕದ ರೂಮಿಗೆ ಹೋಗುವಂಥ ಮತ್ತೊಂದು ಬಾಗಿಲು ಎದುರಿಗೇ ಇತ್ತು. ಆ ಪಕ್ಕದ ರೂಮಿನಲ್ಲಿ ಯಾರು ಇದ್ದರೋ ತಿಳಿದುಕೊಳ್ಳಬೇಕು. ಆಗ ಇವರ ಪ್ರಸ್ತುತ ಗೆಳತಿ ಯಾರು ಎಂದು ತಿಳಿಯುತ್ತದೆ. ಶುಷ್ಕ ನಗೆ ಅಪ್ರಯತ್ನವಾಗಿ ಮೂಡಿತು. ಇದ್ಯಾವುದೂ ಹೊಸತಲ್ಲ... ಹಲವು ಬಾರಿ ಬೆಂಗಳೂರಿಗೆ ಇವರು ಬರುವುದೇ ಗೆಳತಿಯರ ಒಡನಾಟಕ್ಕೆ... ಅಲ್ಲಿ ಇಲ್ಲಿ ಮಲಗಿ ಎದ್ದು ಬರುವ ಇವರೊಂದಿಗೆ ಸೇರಲೇ ಅಸಹ್ಯ ನಂಗೆ... ನಿಂಗೆ ಸೆಕ್ಸ್‌ನಲ್ಲಿ ಆಸಕ್ತಿಯೇ ಇಲ್ಲ!.. ಎಂದು ಗೊಣಗುತ್ತಾರೆ. ಹಲವು ಹೆಣ್ಣುಗಳ ಸಹವಾಸ ಮಾಡುವ ನಿಮ್ಮಲ್ಲಿ ಆಸಕ್ತಿ ಇಲ್ಲ.. ಅಷ್ಟೇ... ಸೆಕ್ಸ್.. ನನಗೂ ಬೇಕು.. ಆದರೆ ಪ್ರೀತಿಯೊಂದಿಗೆ..! ಎಂದು ಅವರಿಗೆ ಒಮ್ಮೆ ಹೇಳಬೇಕು.. ಸ್ಪಷ್ಟವಾಗಿ ಹೇಳಬೇಕು..

ಯಾಕೆ? ರೆಡಿಯಾಗಲ್ವಾ? ಸುಸ್ತಾಗಿದ್ಯ?.. ಆಡುತ್ತಿದ್ದ ಮಾತು ಮುಗಿಸಿ, ಮತ್ತೊಂದು ನಂಬರ್ರಿಗೆ ಬಟನ್ ಒತ್ತುತ್ತಾ ಪ್ರಶ್ನಿಸಿದರು.

ನಾನು ಉತ್ತರಿಸುವ ಹೊತ್ತಿಗೆ ಅತ್ತಲಿರುವವರು ಕರೆಗೆ ಉತ್ತರಿಸಿದರೆ ನನ್ನ ಮಾತು ಇವರು ಕೇಳಿಸಿಕೊಳ್ಳುವುದೇ ಇಲ್ಲ, ಅತ್ತ ಇರುವವರು ಉತ್ತರಿಸಲಿಲ್ಲವೇನೋ, ಇವರ ಗಮನ ನನ್ನತ್ತ ಸರಿಯಿತು.

ರೆಡಿಯಾಗಿ ಬಿಡು. ಹೊತ್ತಾಗುತ್ತೆ..

ನಾವು ಮಾತಾಡಬೇಕು.. ನಿಧಾನವಾಗಿ ಹೇಳಿದೆ. ಅಚ್ಚರಿಯಿಂದ ನನ್ನತ್ತ ನೋಡಿದರು ವಿಕ್ರಮ್. ನಂತರ ತಮ್ಮ ಗಡಿಯಾರದತ್ತ ನೋಡಿಕೊಂಡರು. ಎರಡೇ ಹೆಜ್ಜೆಗಳಲ್ಲಿ ನನ್ನ ಮುಂದಿದ್ದ ಟೀಪಾಯ್ ಬಳಿ ಬಂದು, ಅದರ ಮೇಲೆ ಕುಳಿತು ನನ್ನತ್ತ ಬಾಗಿದರು.

ಏನು? ಅವರ ತೀಕ್ಷ್ಣ ನೋಟಕ್ಕೆ ಬೆಚ್ಚಿದೆ.

ನಿಮಗೆ ಚೆನ್ನಾಗಿ ಗೊತ್ತು ನೀವು ರಾಜಕೀಯ ಇಳಿಯೋದು ನಂಗೆ ಇಷ್ಟವಿಲ್ಲ..

ಗೊತ್ತು..

ನನ್ನ ಸಲಹೆ, ನನ್ನ ಬೆಂಬಲ ಏನೂ ಬೇಡ ಅಂದವರು ನೀವು.. ಈಗ ನಿಮ್ಮಪ್ಪನಿಗೆ ಹೇಳಿ ನನ್ನ ಕರೆಸಿಕೊಂಡಿದ್ದೀರಿ.

ಬಂದಾಯಿತಲ್ಲ... ಈಗೇನು ಮಾತು?...ಉಡಾಫೆಯ ದನಿ. ನನ್ನ ತಾಳ್ಮೆಯನ್ನು ಪರೀಕ್ಷಿಸುವ ದನಿ.

ಇಲ್ಲಿಗೆ ಬಂದವಳು.. ಪ್ರೆಸ್ ಕಾನ್‌ಫರೆನ್ಸಿಗೆ ಬರಲೇಬೇಕೆಂದೇನಿಲ್ಲ. ನನ್ನ ಹೆಂಡತಿಗೆ ಹುಷಾರಿಲ್ಲ ಅಂದರೆ ಆಯಿತು... ಅಲ್ಲವೇ... ನೀವು, ಮಾವ ಹೋಗಿ... ನಾನು ಇಲ್ಲೇ ಇರ್ತೀನಿ...

ನನ್ನ ಮಾತು ಮುಗಿಸುವ ವೇಳೆಗೆ ಅವರ ಮೊಬೈಲ್ ಹೊಡೆದುಕೊಳ್ಳಲಾರಂಭಿಸಿತು.

ದೀರ್ಘವಾಗಿ ಉಸಿರೆಳೆದು, ಮೇಲೆದ್ದು ಅತ್ತ ಹೋಗಿ ಮೊಬೈಲ್ ಕಿವಿಗಿರಿಸಿಕೊಂಡರು.

ಹಾಂ..... ಆಯ್ತು.. ಇರ್ತೀವಿ ಯೆಸ್.ಯೆಸ್. ಹೊರಟ್ವಿ...

ಸಿ.ಎಂ. ದು ಫೋನ್. ಸ್ವತಃ ಅವರೇ ಬರ್ತಿದಾರೆ ನನ್ನ ಪಕ್ಷಕ್ಕೆ ಸ್ವಾಗತಿಸಲು..!.. ನನ್ನ ಬೆಲೆ ನಿಂಗೆ ಗೊತ್ತಿಲ್ಲ....

ಅವರು ರಾಜಕೀಯದವರು. ಅವರಿಗೆ ನಿಮ್ಮ ಬೆಲೆ ಚೆನ್ನಾಗಿ ಗೊತ್ತು. ನನಗಿಂಥ ಕ್ಲಿಯರ್ರಾಗಿ ನಿಮ್ಮ ಆಸ್ತಿಯ ವಿವರ ಗೊತ್ತಿರುತ್ತದೆ. ಹಾಗಾಗಿ ಈ ಬೆಲೆ!...

ನಿಂಗೆ ಗೊತ್ತಾಗೊಲ್ಲ.. ಸುಮ್ಮನೆ ಮಾತು ಬೇಡ, ಹೊರಡು. ಲೇಟಾಗುತ್ತೆ...

ಉಗುಳು ನುಂಗಿ ಅವರತ್ತ ನೋಡಿದೆ.

ಇಷ್ಟು ವರ್ಷಕ್ಕೆ ಮೊದಲ ಬಾರಿ ನಾಲ್ಕು ಜನರ ಮುಂದೆ ನನ್ನ ಅವಶ್ಯಕತೆ ನಿಮಗೆ ಬಂದಿದೆ. ಅದೂ ನಾನು ಬೇಡ ಎಂದು ಹೇಳುತ್ತಿರುವ ರಾಜಕೀಯ ಸೇರಲು! ಸಂಬಂಧ ಎಷ್ಟೇ ಕೆಟ್ಟು, ಕೊಳೆತು ನಾರಿದರೂ ಹೆಂಡತಿ, ಅಪ್ಪ, ಅಮ್ಮ ಎಲ್ಲಾ ಇಮೇಜಿಗೆ ಬೇಕು ಪತ್ರಿಕೆಯಲ್ಲಿ ಹೆಂಡತಿಯೊಂದಿಗೆ ಫೋಟೋ, ಮತ ಕೇಳಲು ಬೀದಿ, ಬೀದಿ, ಮನೆ ಮನೆಗೆ ಹೋದಾಗ ಧರ್ಮಪತ್ನಿ ಜೊತೆಗಿರಬೇಕು. ಹಾಗಾಗಿ ಈಗ ನಾನು ಬೇಕು.. ನಿಧಾನವಾಗಿ ಸಣ್ಣದನಿಯಲ್ಲಿ ಹೇಳಿದೆ. ಅವರ ಮುಖ ಕೆಂಪೇರಿತು.

ಅದಕ್ಕೆ? ಅದಕ್ಕೆ ಈಗ ನನ್ನೇನು ಮಾಡು ಅಂತೀ? ಅಸಹನೆ ದನಿಯಲ್ಲಿ ತುಂಬಿ ತುಳುಕುತಿತ್ತು.

ಏನು ಮಾಡಬಲ್ಲಿರಿ? ನೀವು ರಾಜಕೀಯಕ್ಕೆ ಹೋಗುವುದೇ ಬೇಡ ನಂಗೆ. ಆದರೆ ನೀವು ರಾಜಕೀಯ ಪ್ರವೇಶ ಮಾಡಲು ನಾನು ನಿಮ್ಮ ಪಕ್ಕ ಇರಬೇಕು ಇದೆಂಥ ವಿಪರ್ಯಾಸ!

ರಾಜಕೀಯದ ಬದುಕಿನ ಹೊಸ್ತಿಲಲ್ಲಿ ನಿಂತಿದ್ದೇನೆ. ಈಗ ಅಪಶಕುನದ ಮಾತು ಬೇಡ.. ಅವರ ಗಡಸು ದನಿ ನನ್ನ ಮೆತ್ತಗೆ ಮಾಡುವ ಬದಲು ಮೊದಲ ಬಾರಿಗೆ ಉದ್ರೇಕಿಸಿತು.

ಹಾಗಾದರೆ ನನಗಾಗಿ ಏನು ಮಾಡ್ತೀರಿ ನೀವು?...

ಇವತ್ತಿನ ಪತ್ರಿಕಾಗೋಷ್ಠಿ ಮುಗಿಯಲಿ ನಾಳೆ.. ನಾನು ನೀನು ಒಡವೆ ಶಾಪಿಂಗ್‌ಗೆ ಹೋಗೋಣ... ಇದೇ ಹೋಟೇಲ್ಲಿನ ಕಾನ್ಫರೆನ್ಸ್ ಹಾಲಿನಲ್ಲಿ ವಜ್ರದ ಒಡವೆಗಳ ಪ್ರದರ್ಶನ ಹಾಗೂ ಮಾರಾಟ ಇದೆ.

ನಿಮ್ಮ ಪ್ರೇಯಸಿಗೆ ಕೊಡಿಸಿ ಆಯ್ತಾ?...

ಮಾತಿನ ಮೇಲೆ ನಿಗಾವಿರಲಿ.

ಯಾಕೆ?... ಹೋಗಲಿ... ರಾಜಕೀಯದಲ್ಲಿ ಇಮೇಜ್ ಕಾದುಕೊಳ್ಳಬೇಕಲ್ಲವೇ... ಇತರೆ ಸಂಬಂಧಗಳನ್ನು ಬಿಟ್ಟುಬಿಡ್ತೀರಾ?....

ಅವರ ಕೈಯಲ್ಲಿದ್ದ ಮೊಬೈಲ್ ತಿರುಗಿ ಹೊಡೆದುಕೊಳ್ಳಲಾರಂಭಿಸಿತು. ಸ್ವಿಚ್ ಅದುಮಿ,

ಬರ್ತಿದೀವಿ.. ಹೊರಟ್ವಿ... ಎಂದು ಆಫ್ ಮಾಡಿದರು.

ಈಗೇನು?... ನನ್ನತ್ತ ಬೀರಿದ ನೋಟದಲ್ಲಿ ಅಸಹನೆ.

ನೀವು ಚುನಾವಣೆಗೆ ನಿಂತು, ಅದರ ಫಲಿತಾಂಶ ಬರುವವರೆಗೂ ನಿಮ್ಮ ಜೊತೆ ಇರುತ್ತೇನೆ. ನಂತರ ನಂಗೆ ಬಿಡುಗಡೆ ಬೇಕು... ಮಾತು ಹೊರ ಬಿದ್ದ ಮೇಲೇ ನಾನೇ ದಂಗಾಗಿ ನಿಂತೆ. ಈ ಮಾತು ಆಡಿದ್ದು ನಾನೆಯೇ?!... ಮದುವೆಯಿಂದ, ಇವರಿಂದ ಬಿಡುಗಡೆ ತೆಗೆದುಕೊಂಡು ಏನು ಮಾಡಬಲ್ಲೆ? ಯಾಕೆ ಹಾಗೆ ಕೇಳಿದೆ..?.. ಕೈಗಳು ನಡುಗಿದವು.

ವಿಕ್ರಂ ಕೂಡ ದಂಗಾಗಿ ನನ್ನತ್ತ ನೋಡಿದರು.

ಬಿಡುಗಡೆಯೇ?...! ಯಾವುದರಿಂದ?...

ಮದುವೆಯೆಂಬ ಈ ಬಂಧನದಿಂದ. ಪತ್ನಿ ಎಂಬ ಸ್ಥಾನದಿಂದ, ಹಳ್ಳಿಮನೆ ಸೊಸೆ ಎಂಬ ಪಾತ್ರದಿಂದ... ಕಾರಿನಲ್ಲಿ ಬರುತ್ತಾ ಮೂಡಿದ ವಿಚಾರದ ಮಾತಿನ ಸ್ವರೂಪ.

ನಿನ್ನ ತವರಿನವರು ನಿನ್ನ ಸೇರಿಸುತ್ತಾರೆಯೇ?.... ಎಲ್ಲಿಗೆ ಹೋಗುವೆ ನೀನು?... ವ್ಯಂಗ್ಯ ಮರಳಿತು ಅವರ ದನಿಗೆ.

ಗೊತ್ತಿಲ್ಲ ಯೋಚಿಸಿಲ್ಲ.. ಆದರೆ ನನಗೆ ಮನೆಯಲ್ಲಿ ಉಸಿರು ಕಟ್ಟಿದಂತೆ ಆಗುತ್ತಿದೆ... ಎಲ್ಲಿಗೂ ಹೋಗಲಾರದವಳು.. ನಿಮ್ಮ ಮನೆಯ ತೊತ್ತು.. ಎಂದಿರುವ ನಿಮ್ಮ ಅಭಿಪ್ರಾಯ... ಮಾತಾಡುತ್ತಾ ಆಡುತ್ತಾ ದುಃಖ ಉಕ್ಕಿಬಂತು ಅಳಬಾರದು.. ಅತ್ತು ಸೋಲಬಾರದು... ದೌರ್ಬಲ್ಯ ಪ್ರದರ್ಶಿಸಬಾರದು.. ಎಂದು ಎಷ್ಟೇ ನಿಗ್ರಹಿಸಿಕೊಂಡರೂ ದನಿ ಭಾರವಾಯಿತು. ಕಂಬನಿ ಕೆನ್ನೆಗೆ ಇಳಿಯಿತು.

ಹುಚ್ಚಿ!.. ಹುಚ್ಚಿ!.. ಬಳಿ ಬಂದು ಭುಜ ಬಳಸಿದರು. ಅವರ ದನಿ ಮೃದುವಾಯಿತು.

**(ಸಶೇಷ)**